ಇಂದು ದಿನಾಂಕಃ13.03.2020 ರಂದು ಪಿಡಬ್ಲ್ಯೂಃ1 ರವರನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಪಾಟೀ ಸವಾಲುಃ</u>** ಪ್ರತಿವಾದಿಯ ಪರ ಶ್ರೀ ಹೆಚ್.ಎಸ್.ಕೆ. ವಕೀಲರಿಂದಃ

1. ನನ್ನ ತಂದೆಗೆ ನಾನು ಒಬ್ಬನೇ ಮಗ. ದಾವಾ ಆಸ್ತಿ ನಂಬರಃ 525 ಇರುತ್ತದೆ. ಸದರಿ ಆಸ್ತಿಯ ವಿಸ್ತೀರ್ಣ ಉದ್ದಃ155 ಮೊಳ, ಅಗಲಃ13 ಮೊಳ ಇರುತ್ತದೆ. ಸದರಿ ಆಸ್ತಿ ನನ್ನ ಅಜ್ಜ ಕುಂಬಾರದವರಿಂದ ಖರೀದಿಸಿದ ಆಸ್ತಿ ಇರುತ್ತದೆ. ಈ ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಸದರಿ ಆಸ್ತಿಯನ್ನು 1932 ರಲ್ಲಿ ನನ್ನ ಅಜ್ಜ ಖರೀದಿಗೆ ತೆಗೆದುಕೊಂಡಿರುತ್ತಾರೆ. ನನ್ನ ಅಜ್ಜನಿಗೆ ಹೆಸರಿಗಿರುವ ಖರೀದಿ ಪತ್ರವನ್ನು ನಾನು ಅನಕ್ಷರಸ್ಥನಿರುವ ಕಾರಣದಿಂದ ಓದಿಲ್ಲ ದಾವೆಯಲ್ಲಿ ನಾನು ವಂಶಾವಳಿಯನ್ನು ಹೇಳಿ ಬರೆಸಿರುತ್ತೇನೆ. ನಾನು ಆ ರೀರಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಆಸ್ತಿಯ ಚೆಕ್ಕುಬಂದಿಯನ್ನು ನಾನು ಈವರೆಗೂ ಬೇರೆಯವರಿಂದ ಓದಿಸಿ ಕೇಳಿ ತಿಳಿದುಕೊಂಡಿಲ್ಲ. 2013-14 ರ ಹಿಂದಿನ ಸಾಲಿನ ಉತ್ತಾರಗಳನ್ನು ಹಾಜರುಪಡಿಸಲು ನನಗೆ ಯಾವುದಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಹಾಜರು ಪಡಿಸಿದ್ದೇನೆ ಎಂದು ನುಡಿಯುತ್ತಾರೆ. 1913 ನೇ ಸಾಲಿನಲ್ಲಿ ನನ್ನ ತಂದೆ ಹೆಸರು ನಿಪಿ-2 ರ ಆಸ್ತಿಯಲ್ಲಿ ನಮೂದು ಆಗಿರುತ್ತದೆ. ನನ್ನ ತಂದೆ ಮರಣ ಹೊಂದಿ 10 ವರ್ಷಗಳಾಗಿರುತ್ತವೆ.

2. ಪ್ರತಿವಾದಿ ಸಂಸ್ಥೆ ಸ್ಥಾಪನೆ ಆಗಿ ಎಷ್ಟು ವರ್ಷಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ದಾವೆ ಮಾಡುವ ಪೂರ್ವದಲ್ಲಿ ನಾನು ನನ್ನ ಆಸ್ತಿಯನ್ನು ಅಳತೆ ಮಾಡಿಸಿಲ್ಲ. ಪ್ರತಿವಾದಿ ಸಂಸ್ಥೆ ಸುಮಾರು 50-60 ವರ್ಷದ ಹಿಂದಿನ ಸಂಸ್ಥೆ ಎಂದರೆ ಸರಿ. ಸದರಿ ಸಂಸ್ಥೆಗೆ ಸೇರಿದ ಹಲವಾರು ಕಟ್ಟಡ ಮತ್ತು ಆಟದ ಮೈದಾನ ಇದೆ ಎಂದರೆ ಸರಿ. ಪ್ರತಿವಾದಿ ಶಿಕ್ಷಣ ಸಂಸ್ಥೆಯ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮಃ 465 ಅಡಿ, ಉತ್ತರ-ದಕ್ಷಿಣಃ 179 ಅಡಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಸಿದ್ದಪ್ಪ ದ್ಯಾವಕ್ಕಳವರ ಭಕ್ಷೀಸು ನೀಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಸದರಿ ದಕ್ಷಿಣಕ್ಕೆ ನಮ್ಮ ಆಸ್ತಿ ಇದೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಬಾಗಿಲು ದಕ್ಷಿಣಕ್ಕೆ ಮುಖ ಮಾಡಿ ಇದೆ. ನಮ್ಮ ಆಸ್ತಿಯಲ್ಲಿರುವ ಶೌಚಾಲಯಗಳು ನಮ್ಮ ಆಸ್ತಿಯ ಉತ್ತರದ ಕೊನೆಯ ಅಂಚಿಗೆ ಇದೆ ಎಂದರೆ ಸಾಕ್ಷಿಯು ಶೌಚಾಲಯದ ನಂತರವೂ ಸಹ ನಮ್ಮ 40 ಅಡಿ ಆಸ್ತಿ ಇದೆ ಎಂದು ನುಡಿಯುತ್ತಾರೆ. ಶೌಚಾಲಯದ ನಂತರ ಪೂರ್ವ-ಪಶ್ಚಿಮವಾಗಿ ಗೋಡೆ ಇರುತ್ತದೆ. ಶೌಚಾಲಯದ ಉತ್ತರ ದಿಕ್ಕಿನಲ್ಲಿ ನಮಗೆ ಸೇರಿದ 40 ಅಡಿ ಜಾಗ ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪ್ರತಿವಾದಿಯರ ಆಸ್ತಿಯಲ್ಲಿ ಕ್ರೀಡಾ ಇಲಾಖೆಯಿಂದ ಒಂದು ಕ್ರೀಡಾಂಗಣ ನಿರ್ಮಿಸಬೇಕೆಂದು ಯೋಜನೆ ರೂಪಿಸಿದ್ದರು ಎಂದರೆ ಸುಳ್ಳು. ಪ್ರತಿವಾದಿಯರು ಈ ದಾವೆ ಮಾಡುವ ಪೂರ್ವದಲ್ಲಿ ಈ ಕಾಂಪೌಂಡ ಕಟ್ಟಲು ಹೋದಾಗ ನಾನು ತೊಂದರೆ ನೀಡಿರುತ್ತೇನೆ ಎಂದರ ಸಾಕ್ಷಿಯು ನಮ್ಮ ಆಸ್ತಿಯಲ್ಲಿ ಕಾಂಪೌಂಡ ಕಟ್ಟಲು ಬಂದಾಗ ನಾನು ವಿರೋದಿಸಿದ್ದು ಪ್ರತಿವಾದಿ ಪೋಲೀಸರ ಸಹಾಯದಿಂದ ಕಾಂಪೌಂಡ ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಸಂಸ್ಥೆ ಕಾಂಪೌಂಡನ್ನು ತಮ್ಮ ಆಸ್ತಿಯಲ್ಲಿಯೇ ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ.

ಕಾಂಪೌಂಡನಿಂದ ದಕ್ಷಿಣ ದಿಕ್ಕಿಗೂ 13 ಅಡಿ ಜಾಗ ಬಿಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಯನ್ನು ನಿರ್ದಿಷ್ಟವಾಗಿ ಎಷ್ಟು ವಿಸ್ತೀರ್ಣವನ್ನು ಪ್ರತಿವಾದಿ ಅತೀಕ್ರಮಣ ಮಾಡಿದ್ದಾರೆ ಎಂಬ ದಾಖಲಾತಿಗಳು ಇವೆ ನಮ್ಮ ಆಸ್ತಿಯ ಉತ್ತರಕ್ಕಿರುವ ಗೋಡೆಯಿಂದ ಉತ್ತರಕ್ಕೆ ನಮ್ಮ ಯಾವುದೇ ಆಸ್ತಿ ಇಲ್ಲ ಎಂದು ಗೊತ್ತಿದ್ದರೂ ಸಹ ಪ್ರತಿವಾದಿ ಸಂಸ್ಥೆಯನ್ನು ಎತ್ತಿಹಾಕುವ ಉದ್ದೇಶದಿಂದ ಖೊಟ್ಟಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

4. ಪ್ರತಿವಾದಿ ಸಂಸ್ಥೆ ತಮ್ಮ ಆಸ್ತಿಯಲ್ಲಿ ಕಾಂಪೌಂಡ ನಿರ್ಮಿಸಿರುವುದರಿಂದ ನಾನು ಕೇಳಿರುವ ಪರಿಹಾರಗಳನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಸಂಸ್ಥೆ ಯಾವುದೇ ನಷ್ಟ ಪರಿಹಾರ ತುಂಬಿಕೊಡಲು ಬಾಧ್ಯಸ್ಥವಾಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಒಂದು ಸಾರ್ವಜನಿಕ ಶಿಕ್ಷಣ ಸಂಸ್ಥೆ ಇದ್ದು ಕ್ರೀಡಾಂಗಣ ನಿರ್ಮಿನಿಸಲು ತಮ್ಮ ಆಸ್ತಿಯ ಹದ್ದುಬಸ್ತು ಗುರುತಿಸಿಕೊಳ್ಳಲು ಮುಂದಾದಾಗ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಬಡೇಸಾಬ ಅವರು ನಮ್ಮ ಕುಟುಂಬಕ್ಕೆ ಯಾವುದೇ ರೀತಿ ಸಂಬಂಧಿಸಿಲ್ಲದಿದ್ದರೂ ಸಹ ಸದರಿ ವ್ಯಕ್ತಿ ನಮ್ಮ ತಾತ ಎಂದು ಹೇಳಿ ನಾನು ಈ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಡೇಸಾಬ ಹಾಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.